Rega No BG 155

Sri "SATYAVADI"
— DAILY —
MYSORE4
46 th Year

Protect the cow

— ೬೧ —

ಸತ್ಯವಾದಿ
SATYAVADI

ಸ್ಥಾಪಕರು— ಅರಮನೆ ಸಂಸ್ಥೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

30—7—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆ ನುನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ವಿದ್ಯಾರ್ಥಿಗಳ ಮುಷ್ಕರ ನಿಂತಿತು

ನ್ಯಾಯಾಧೀಶರಾಗಿ ನೇಮಕ

ನವದೆಹಲಿ 28— ರಾಷ್ಟ್ರಪತಿಗಳು ಶ್ರೀ ಇಕ್ಬಾಲ್ ಹುಸೇನಂನ್ನು 1962 ರ ಆಗಸ್ಟ್ 1 ರಿಂದ 1963 ಜೂನ್ 7 ರವರೆಗೆ ಮೈಸೂರು ಶ್ರೇಷ್ಠ ನ್ಯಾಯಾಸ್ಥಾನದ ಅಡಿಷನಲ್ ನ್ಯಾಯಾಧೀಶರನ್ನಾಗಿ ನೇಮಿಸಿರುವರು

ಕನ್ಯಾಪಹರಣ

ನವದೆಹಲಿ 29 — ಶನಿವಾರ ಮುಂಜಾನೆ ಸರ್ದಾರ್ ದಂಗ್ ವಿಮಾನ ನಿಲ್ದಾಣದ ಏರ್ ಹೋಸ್ಟೆಸ್ ಟ್ರೈನಿ 20 ವರ್ಷದ ಪ್ರವಿಾಳ ಕಾಪೂರನ್ನು ಅಪಹರಿಸಿದ ನಾಲ್ವರು ಪೈಕಿ ಪೋಲೀಸರು ಈ ದಿನ ಮೂವರನ್ನು ಬಂಧಿಸಿದರು ಮಧ್ಯರಾತ್ರಿಯಲ್ಲಿ ಅವಳನ್ನು ಅಪಹರಣ ಮಾಡಿದವರು ಮನೆಗೆ ತಂದ ಬಟ್ಟರಪತ್ರೆ ಆಗಿರುವ ರಾಜಕುಮಾರ ಎಂಬವನನ್ನು ವಿಚಾರಣೆ ಆಗಿರುವುದಾಗಿ ಸಹಿ ಪಡೆದರು ಎಂದು ಪ್ರವಿಾಳ ತಿಳಿಸಿರುವರು. ಸಾರಿಗೆಯ ಇಲಾಖೆಯ ಉದ್ಯೋಗಿ ಆದ ಅವನು ತಾನು ಮನೆಬಿಟ್ಟು ಹೊಂಟರೆ ಹಿಂಬಾಲಿಸುವನೆಂದು ತಿಳಿಸಿದರು

ಹೇರ ಕಾರ್ಯಾಚರಣೆ
ಶಿಫಾರಸು

ಹೈದರಾಬಾದು 29 — ಭೂ ತೆರಿಗೆ ಮಸೂದೆಯನ್ನು ಸರ್ಕಾರ ವಾಪಸು ಪಡೆದಿದ್ದರೆ ನೇರ ಕಾರ್ಯಾಚರಣೆ ಹೂಡಬೇಕೆಂದು ಶಾಸನ ಸಭೆ ಸ್ವತಂತ್ರ ಪಕ್ಷ ಆಂಧ್ರ ರಾಜ್ಯ ಸ್ವತಂತ್ರ ಪಕ್ಷಕ್ಕೆ ಶಿಫಾರಸು ಮಾಡಿದೆ ಎಂದು ಸ್ವತಂತ್ರ ಪಕ್ಷದ ನಾಯಕ ಶ್ರೀ ಜೆ ಲಕ್ಷ್ಮಣ್ಣ ಸುದ್ದಿಗಾರರಿಗೆ ತಿಳಿಸಿದರು ಜಳುವಳಿ ಬಗ್ಗೆ ಕಮ್ಯೂನಿಸ್ಟರೊಡನೆ ಜಂಟಿ ಕಾರ್ಯಕ್ರಮವಿಲ್ಲವೆಂದು ಅವರು ನುಡಿದರು. ಮತ್ತಷ್ಟು ಭೂ ತೆರಿಗೆ ವಿರುದ್ಧ ಸ್ವೀಕರಿಸಿರುವ ಜನತೆಯ ಪರವಾಗಿ ವರ್ತಿಸುವುದಾಗಿ ಅವರು ನುಡಿದರು

ಹಿಂಸಾವೃತ್ತಿ

ಶಿವಮೊಗ್ಗ 29 — ಮುಷ್ಕರ ಹೂಡಿರುವ ಕಾಲೇಜ್ ವಿದ್ಯಾರ್ಥಿಗಳು ಹೋಗುತ್ತಿದ್ದ ಮುಖ್ಯ ಮಂತ್ರಿಗಳ ಕಾರಿಗೆ ಕಲ್ಲು ಬೀಸಿದರೆಂದು ಮತ್ತು ಮುಖ್ಯ ಮಂತ್ರಿಗಳು ಭಾಷಣ ಮಾಡಲಿದ್ದ ಸಭೆಯಲ್ಲಿ ಗಲಭೆ ಮಾಡಲು ಪ್ರಯತ್ನಿಸಿದರೆಂದು ವರದಿ ಆಗಿದೆ ಈ ಸಂದರ್ಭದಲ್ಲಿ ಹತ್ತು ಮಂದಿಯ ಬಂಧನವಾಗಿದೆ.

ಖಂಡನೆ

ಬೆಂಗಳೂರು 29 — ಶಿವಮೊಗ್ಗಾದಲ್ಲಿ ವಿದ್ಯಾರ್ಥಿ ಮುಷ್ಕರಗಾರರು ನಡೆಸಿರುವ ಚಳವಳಿಯನ್ನು ಮುಖ್ಯ ಮಂತ್ರಿಗಳು ಖಂಡಿಸಿದರು ಇವಕ್ಕೆಲ್ಲ ಸರ್ಕಾರ ಜಗ್ಗಿ ಬಾಗುವುದಿಲ್ಲ ಹಿಂಸಾವೃತ್ತಿಗೆ ಇಳಿದರೆ ಅವರಿಗೆ ಏನೂ ಸಾಧಿಸಲು ಆಗುವುದಿಲ್ಲ ಎಂದರು

ವೆಸ್ಟೂರಿನಲ್ಲಿ ಕಾಲೇಜು ವಿದ್ಯಾರ್ಥಿ ವ್ಯವಸ್ಥೆ [illegible]

ನವ[illegible]ಡ ಬಿನಂದ
ರಾಷ್ಟ್ರ[illegible]ವಾಡಲು
ಜರೂರ[illegible]ನು ಕೈಗೊ
ಸುವಂತೆ

ತೆರಿಗೆ ಏರಿಕೆಗೆ ಸಮರ್ಥನೆ

ತಿರುಚಿರಪಳ್ಳಿ 29 — ದ್ರಾವಿಡ ಮುನ್ನೇತ್ರ ಕಳಗಂ ಅಕ್ಕಮುಕೂಟವೆಂದು ಸರ್ಕಾರ ಘೋಷಣೆ ಮಾಡುವವರೆಗೆ ನ್ಯಾಯವಿದೆ ಎಂದು ದ್ರಾವಿಡ ಕಳಗಂ ನಾಯಕರಾದ ಶ್ರೀ ಇವಿ ರಾಮಸ್ವಾಮಿ ನಾಯ್ಕರು ಇಲ್ಲಿ ಬಹಿರಂಗ ಸಭೆಯಲ್ಲಿ ತಿಳಿಸಿದರು. ಡಿಎಂಕೆಯವರ ಪಿಕೆಟಿಂಗ್ ಕಾರ್ಯಕ್ರಮವನ್ನು ಒಂದು ಸ್ಟಂಟ್ ಎಂದು ಅವರು ನುಡಿದರು ಜನರ ಜೀವನ ಮಟ್ಟ ಏರಿಕೆಗೆ ಬೆಳೆಗಳ ಏರಿಕೆ ಆಗಿದೆ ಎಂದು ಅವರು ತಿಳಿಸಿದರು ಯೋಜನೆಯ ಪ್ರಾಜೆಕ್ಟುಗಳನ್ನು ಜಾರಿ ಮಾಡುವದಕ್ಕೆ ಹೊಸ ತೆರಿಗೆ ವಿಧಿಸಿದೆ ಎಂದು ಅವರು ನುಡಿದರು.

ಈಜುವ ಕೊಳಕ್ಕೆ ಮಂತ್ರಿಯವರು

ಮೈಸೂರು ಸುಬ್ಬರಾಯನ ಕೆರೆ ಬಾಹುಸಾರ್ ಈಜುವ ಕೊಳಕ್ಕೆ ಈ ದಿನ ಬೆಳಿಗ್ಗೆ ಪೌರಸಭೆಗಳ ಮಂತ್ರಿ ಶ್ರೀ ಕೆ ಪುಟ್ಟಸ್ವಾಮಿಯವರು ಭೇಟಿ ಕೊಟ್ಟಿದ್ದರು. ಅವರ ಗೌರವಾರ್ಥ ಶ್ರೀ ಯು ವೆಂಕಟರಾವ್‌ರವರು ಟೀ ಏರ್ಪಡಿಸಿದ್ದರು

×

ಕಲ್ಕತ್ತಾ 29 — ಸ್ಥಳೀಯ ಕಾಂಗ್ರೆಸ್ಸು ಕಾರ್ಯಕರ್ತರನ್ನು ಉದ್ದೇಶಿಸಿ ಭಾಷಣಮಾಡುತ್ತಾ, ಉಡಕ್ಕಿನ ಪರಿಸ್ಥಿತಿ ವಿಷಮಿಸಿರುವ ಬೆದರಿಕೆ ಉಂಟಾಗಿದೆ ಇದು ಇನ್ನೂ ಅಕ್ರಮಿಸಿದರೆ ಯುದ್ಧಕ್ಕೆ ಕಾರಣ ಆಗಬಹುದು ಎಂದು ಪ್ರಧಾನಿ ನೆಹರು ತಿಳಿಸಿದರು

ನಾಳೆಯ ಪಂಚಾಂಗ

ಅನ್ಯಾನ ಮಹಾವಿದ್ವಾನ್ ದರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಪಂಪಶ್ಯಾಸ್ತ್ರ ಜೋಯಿಸರಿಂದ

31 ಅಮಾವಾಸ್ಯೆ ಪುಷ್ಯ

ಶ್ರೀ ಭೀವೇಶ್ವರ ವ್ರತದ ಪ್ರಯುಕ್ತ
ಸಕ್ಕರೆ ಬೆಲ್ಲ ಇದೆ

ವಿವಿಧ ವಾರ್ತೆಗಳು

ಉಟಕ್ 29 — ಪಂಡ್ರಕೋಲಿ ಪ್ರಾಥಮಿಕ ಶಾಲೆಯಲ್ಲಿ ಹಾಲಿನ ಪುಡಿಯಿಂದ ತಯಾರಿಸಿದ ಹಾಲು ಕುಡಿದ 10 ವಿದ್ಯಾರ್ಥಿಗಳು ಸಾವನ್ನಪ್ಪಿದರು.

ಂ ಂ

ಅಸ್ಸಾಂನಿಂದ ಶಿಫ್ಟಿಯಾಗಿ ಬಂಗಾಳಕ್ಕೆ ಆಚಾರ್ಯ ವಿನೋಬಾ ಹೋಗಲು ಪೂರ್ವ ಪಾಕಿಸ್ತಾನ ಅವಕಾಶ ಇತ್ತು ದಕ್ಕೆ ಪ್ರಧಾನಿ ನೆಹರು ಕಲ್ಕತ್ತದಲ್ಲಿ ಹರ್ಷವನ್ನು ವ್ಯಕ್ತಮಾಡಿದರು.

ಂ ಂ

ನವದೆಹಲಿ 28 — ಭಾರತದ ವಿರುದ್ಧ ಅಂಬ್ಯಿಯವರ ಮೇಲೆ ಪ್ರಭಾವ ಬೀರುವದರಲ್ಲಿ ಪಾಕಿಸ್ತಾನ ವಿಫಲವಾಗಿದೆ ಎಂದು ವಿದೇಶ ಉಪ ಮಂತ್ರಿ ಶ್ರೀ ದಿನೇಶ ಸಿಂಗರು ನುಡಿದರು

ಂ ಂ

ನವದೆಹಲಿ 29 — 62-63 ನೆಯ ಸಾಲಿಗೆ ಶೇಕಡ 7 ವರೆಯಷ್ಟು ನ್ಯೂಸ್ ಪ್ರಿಂಟು ಆಮದನ್ನು ಖೋತಾ ಮಾಡುವದಕ್ಕೆ ಭಾರತ ಸರ್ಕಾರ ನಿರ್ಧರಿಸಿದೆ.

ಂ ಂ

ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಗಳ ತೆರಿಗೆ ನೀತಿ ಪ್ರತಿಭಟಿಸಿ ಉತ್ತರ ಪ್ರದೇಶದ ಗೋರಖ್ಪುರದ ವರ್ತಕರು ಹರತಾಳ ಆಚರಿಸಿದರು.

ಂ ಂ

ನವದೆಹಲಿ 29 — ಹಳೆಂಪುರ-ಮೊರಾದಾಬಾದಿನ ಮತ್ತು ಹರತಾಳ-ಮೊರಾದಾಬಾದಿನ ಟಿಲಿಗ್ರಾಫು ತಂತಿಗಳನ್ನು ಕೆಲವು ಪುಂಡರು ಕತ್ತರಿಸಿರುವರು.

ಂ ಂ

ವೈಕ್ಸಿಲೋ ನಗರದಲ್ಲಿ ತನ್ನ ಗರ್ಭಕಾಲದಲ್ಲಿ ಟ್ರ್ಯಾಂಕ್ವಿಲೈಸರು ಮಾತ್ರೆ ಸೇವಿಸಿದ ಒರ್ವಳಿಗೆ ಶೋಳುಗಳು ಮತ್ತು ಕಿವಿಗಳು ಇಲ್ಲದ ಮಗು ಜನಿಸಿದೆ

ಈ ತಿಂಗಳ

'ಗೋರಕ್ಷಣ'

ಅನಿವಾರ್ಯ ನಿಮಿತ್ತ ಪ್ರಕಟಿಸಲ್ಪಡುವುದಿಲ್ಲ

ರಾಜ್ಯದ ಆಡಳಿತ ಭಾಷೆ

ಬೆಂಗಳೂರು 28— ರಾಜ್ಯದಲ್ಲಿ ಆಡಳಿತ ಭಾಷೆಯಾಗಿ ಕನ್ನಡವನ್ನು ಜಾರಿಗೆ ತರುವ ಮಸೂದೆಯು ಈ ಶಾಸನಸಭಾ ಅಧಿವೇಶನದಲ್ಲಿ ಕಲ್ಪಟ್ಟು ಮುಂದಿನ ಅಧಿವೇಶನದಲ್ಲಿ ಚರ್ಚಿಸಲ್ಪಡುವುದೆಂದು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಸುದ್ದಿಗಾರರಿಗೆ ತಿಳಿಸಿದರು.

ಬಹು ಭಾರಿ ಕೇಕ್ !

ಅಮೇರಿಕಾದಲ್ಲಿ ಈಚಿನ ಅಧ್ಯಕ್ಷ ಚುನಾವಣಾನಂತರ, ಇಂಡಿಯಾನಾದ ಎವಾನ್ಸವೈಲಿನ ಸ್ಪೇಡಿಯಂನಲ್ಲಿ ಒಂದು ಮಂಜಿನಗೆಡ್ಡೆ ಮಿಶ್ರಿತ ಭಾರೀ 'ಕೇಕ್' ಇಡಲಾಯಿತು ; ಅದು 38 ಅಡಿ ಉದ್ದ 8 ಅಡಿ ಅಗಲ 12 ಅಡಿ ಎತ್ತರ ಇದ್ದಿತು ; ಅಲ್ಲಿಗೆ ಆಹ್ವಾನಿಸಲ್ಪಟ್ಟಿದ್ದ 10000 ಡೆಮೊಕ್ರಾಟರೂ ಮತ್ತು ರಿಪಬ್ಲಿಕನ್ನರೂ ತಮ್ಮ ರಾಜಕೀಯ ಭಿನ್ನಭಾವಗಳನ್ನು ಬಿಟ್ಟು, ಮುಂದೆಮುಂದೆ ನುಗ್ಗಿ ಅದನ್ನು ತಿಂದರು !

ಬರ್ತ್‌ಡೇ ಕೇಕ್ ಒಳಗೆ ಚಲಚ್ಚಿತ್ರ ನಟ !

ಕ್ಯಾಲಿಫೋರ್ನಿಯಾದಲ್ಲಿ ತನ್ನ ಹೆಂಡತಿಯ ಹುಟ್ಟಿದಹಬ್ಬದಲ್ಲಿ ಚಲಚಿತ್ರ ನಟ ಕಾರ್ಕಡ್ ಗ್ವಾಸ ಒಂದು ಆಟ ಆಡಿದ : ಅವಳು ಹುಟ್ಟಿದ ಹಬ್ಬದಂದು ತನ್ನ ಹೋಟಲಿನಲ್ಲಿ 16 ಮಂದಿ ಸ್ನೇಹಿತರ ಚಿಕ್ಕ ಪಾರ್ಟಿ ಏರ್ಪಡಿಸಿದ್ದಳು : ಆಗ ಏನಾಯಿತೆಂದರೆ ಒಂದು 5 ಅಡಿ ಎತ್ತರ 4 ಅಡಿ ಅಗಲದ್ದು 'ಬರ್ತ್‌ಡೇ ಕೇಕ್' ರೂಂ ಒಳಕ್ಕೆ ಗಾಲಿಗಳ ಮೇಲೆ ಬಂದಿತು : ಅದರ ಮೇಲಿನ ಶುಭಾಶಯಗಳನ್ನು ಅವಳು ಓದಿದ್ದು ಮುಗಿದೊಡನೆಯೇ, ಕೇಕ್ ಇಬ್ಭಾಗವಾಗಿ ಒಡೆಯಿತು ; ಅದರ ಒಳಗಿನಿಂದ ಅವಳ ಗಂಡ ಹೊರಕ್ಕೆ ಬಂದ !

ಸ್ತ್ರೀ ದ್ವೇಷಿ

ಅಮೇರಿಕಾದ ಇಲಿನಾಯಿಸು ಪಟ್ಟಣದಲ್ಲಿ ಅಂಚೆಹಂಚುವ ಕೆಲಸದ ಮಹಿಳಾ ಪೋಸ್ಟ್‌ವುಮನ್ನಳಿಗೆ ಬದಲಾವಣೆಯಾದಾಗ ಅಲ್ಲಿಯ ಸ್ತ್ರೀ ದ್ವೇಷಿ ಸಾಲ್ ಸ್ಟಾಂಡಿ, ತನ್ನ ಭೂಮಿಯ ಮೇಲೆ ಬಂದ ಅಂಚೆತರುವ ವಹಿಳೆಯ ಮೇಲೆ ಗುಂಡು ಹಾರಿಸುವುದಾಗಿ ಪ್ರತಿಜ್ಞೆ ಮಾಡಿದನು : ಅವನಿಗೆ ಒಂದು ಕ್ರಿಸ್ಮಸ್ಸು ಪಾರ್ಟಿಲ್ಲನ್ನು ಅವನ ಗೇಟಿನ ಹತ್ತಿರ ವಹಿಳಾ ಪೋಸ್ಟ್‌ವುಮೆನ್ ಇಟ್ಟಾಗ, ತಾನು ಹೇಳಿದ್ದಂತೆ ಗುಂಡುಹಾರಿಸಿದನು ; ಆಗ ಅವನ ಮನೆಯನ್ನು ಸ್ಟೇಟ್ ಗಾರ್ಡ್‌ಗಳು ಮುತ್ತಿ, ಇವನಿಗೂ ಅವರಿಗೂ ಗುಂಡಿನ ಹೊಡೆದಾಟ ನಡೆದು, ಇವನು ಗಾಯಗೊಂಡು ಆಸ್ಪತ್ರೆಗೆ ಸೇರಿಸಲ್ಪಟ್ಟನು ; ಅಲ್ಲಿ ಸ್ತ್ರೀ ನರ್ಸ್‌ಗಳ ಮುಖ ಕಾಣದಿರಲು ಸಹ್ಯವಾಗಿ ಅಂಚಿದನು ; ಇವನು ಪೂರ್ಣವಾಗಿ ಗುಣಹೊಂದಿ, ಆಸ್ಪತ್ರೆಯಿಂದ ಹೊರಟಾಗ, ಸ್ತ್ರೀ ನರ್ಸ್‌ಗಳು ನನಗೆ ತುಂಬಾ ಒಳ್ಳೆಯವರಾಗಿದ್ದರು, ಇನ್ನು ನಾನು ಸ್ತ್ರೀಯರನ್ನು ದ್ವೇಷಿಸುವುದಿಲ್ಲ, ಎಂದು ಹೇಳಿದನು !

The Municipal Poor Students' Feeding Hostel
Chamaraja Road, Mysore

NOTICE Dated 27 th July 1962.

Arrangements will be made as usual for providing free Boarding and Lodging facilities in the Hosel at Sri Amble Pandit Choultry, Chamaraja Road, Mysore, during 1962–63 to a certain number of Poor students studying in several colleges in Mysore City, under the auspicies of the Mysore Clty Poor Students' Feeing Committee. Applications in the prescribed Form from poor students will be received up to 3-00 P. M. on 3rd August 1962. Applications received after the due date will not be entertained.

Application Forms can be had on payment of 6 nP. per Form in the Municipal office on all working days.

Y. M. Krishnamurthy
Revenue Officer, C M C & Secretary P S F C, Mysore

Mysore Dasara Exhibition 1962.

CULTURAL PROGRAMME

The Date of receipt of applications for MUSIC, DRAMA, DANCE, JANAPADA, GEETHA, DEVARANAMA, LAVANI, FOLK-ARTS, YAKSHAGANA has been extended upto 6th August, 1962.

Secretary,
Dasara Exhibition Committee, Mysore.

ವುಡ್‌ಲಾಂಡ್

25 th Silver Jubilee week
೨೫ನೇ ರಜತಮಹೋತ್ಸವ ವಾರ

Junglee ಜಂಗ್ಲಿ

ಅಪ್ರತಿಮ ಹಿಂದಿ ಚಿತ್ರರತ್ನ .... ದಿನವಹಿ 3 ಪ್ರದರ್ಶನಗಳು

ಆಪೆರಾ— **20—7—62** ರಿಂದ

ಜಾದೂ ಮಹಲ್ **Jadoo Mahal**

ಹೆಲೆ, ಅಜಾದ್, ಹೀರಲಾಲ್, ಕೃಷ್ಣಕುಮಾರಿ, ಜೈಕ್ ಪಾತ್ರವಹಿಸಿರುವ
ಮೂಜೂರಾಜಾಲಗಳಿಂದ ಕೂಡಿದ ರೋಮಾಂಚಕ ಹಿಂದಿ ಚಿತ್ರ
ದಿನವಹಿ 3 ಆಟಗಳು

SHAKTI
SUDHA

A Superb Tonic

Help The 'Gorakshana'

dvertise in Gorakshana and help the pious cause

ಗೋರಕ್ಷಣ ಪತ್ರಿಕೆಗೆ ಜಾಹೀರಾತುಗಳನ್ನು ಕೊಡಿಸಿ ಹೆಚ್ಚಿನ ಆರ್ಥಿಕ ಸಹಾಯ ಮಾಡಿ

Published by the Proprietor,
rata M. [illegible] Rao. at the
Mysore. 4